ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-**1,** ಹಾವೇರಿ
**ಎಸ್.ಸಿ. 13/2024**

PW-03

CW-07

| | |
|---|---|
| ಸಾಕ್ಷಿದಾರರ ಹೆಸರುಃ | ಮೈಲಾರಪ್ಪ ರಾಮಪ್ಪ ಹೀರೆಕಣಗಿ |
| ವಯಸ್ಸುಃ | 36 ವರ್ಷ |
| ಉದ್ಯೋಗಃ | ವ್ಯವಸಾಯ |
| ಹಾಲಿ ವಾಸ ಸ್ಥಳಃ | ಹಳೆ ಗೆಜ್ಜಿಹಳ್ಳಿ ತಾಃ ಹಾನಗಲ್ಲ |

ದಿನಾಂಕ**: 21.03.2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು**.**

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ

ಚಾಸಾ-1 , 6 , 7 ಗೊತ್ತು. ಚಾಸಾ- 9 ರಿಂದ 23 ರವರು ಗೊತ್ತು. ಆರೋಪಿತರು ಗೊತ್ತು. 1 , 2 ನೇ ಆರೋಪಿತರು ನಮ್ಮೂರಿನವರು. 3 ನೇ ಆರೋಪಿಯ ಕಾಲವೆ ಕಲ್ಲಾಪೂರ ಗ್ರಾಮದವನು. ಚಾಸಾ-24 ನನ್ನ ತಂದೆ. ಚಾಸಾ-25 ನನ್ನ ಅಣ್ಣ.

2022 ರಲ್ಲಿ ನಮ್ಮೂರಲ್ಲಿ ದ್ಯಾಮವ್ವ ಉರ್ಫ ಕೆಂಗಣ್ಣ ದುರ್ಗಾದೇವಿ ಜಾತ್ರೆ ಇತ್ತು. ತಾಃ 22.03.2022 ರಂದು ಚಾಸಾ-1 ರವರು ಜಾತ್ರೆಯ ನಿಮಿತ್ತ ದ್ಯಾಮವ್ವ ದೇವಿಯ ಮೂರ್ತಿಯ ಮೆರವಣಿಗೆ ಮಾಡಲು ಟ್ರ್ಯಾಕ್ಟರನ್ನು ಸಿದ್ದಪಡಿಸಿ ರಾತ್ರಿ ಮನೆಗೆ ವಾಪಸ್ಸಾಗುತ್ತಿದ್ದೆವು. ಚಾಸಾ-1 ರವರು ಅಲ್ಲಿಯೇ ಅವರ ಮನೆ ಬಳಿ ಇದ್ದರು. ಆಗ ರಾತ್ರಿ 10.00 ರ ಸುಮಾರಿಗೆ 1 ರಿಂದ 3 ಜನ ಆರೋಪಿತರು ಬೈಕನಲ್ಲಿ ಬಂದು ಚಾಸಾ-1 ರವರನ್ನು ಕುರಿತು ಅವರ ಓಣಿಗೆ ನೀರು ಯಾಕೆ ಬಿಟ್ಟಿಲ್ಲ ಎಂದು ಕೇಳಿ ಅವರ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿದರು. ಆಗ ನಾನು, ಚಾಸಾ-6 ಮತ್ತು 8 ಸೇರಿ ಬಿಡಿಸಿಕೊಳ್ಳಲು ಹೋಗಿದ್ದು, ಅಷ್ಟರಲ್ಲಾಗಲೇ 1 ನೇ ಆರೋಪಿಯು ತನ್ನ ಮೋಟರ ಸೈಕಲನಲ್ಲಿದ್ದ ಬ್ಯಾಗನಲ್ಲಿದ್ದ ಚಾಕುವನ್ನು ತೆಗೆದುಕೊಂಡು ಬಂದು, ಅದನ್ನು ನನ್ನ ಎಡ ಪಕ್ಕಡಿಗೆ ಮತ್ತು ಬೆನ್ನಿಗೆ ಚುಚ್ಚಿದರು. ಅದರಿಂದಾಗಿ ನನಗೆ ರಕ್ತಗಾಯವಾಗಿತ್ತು. ಬಿಡಿಸಲು ಬಂದ ಚಾಸಾ-8 ರವರಿಗೆ 1 ನೇ ಆರೋಪಿಯು ಚಾಕುವಿನಿಂದ ಬೆನ್ನಿಗೆ ಚುಚ್ಚಿ ರಕ್ತಗಾಯಪಡಿಸಿದರು. ಅದೇ ರೀತಿ ಚಾಸಾ-6 ರವರಿಗೂ ಸಹ ಕೈಗೆ 1 ನೇ ಆರೋಪಿಯು ರಕ್ತಗಾಯಪಡಿಸಿರುತ್ತಾನೆ. ಆಗ ಚಾಸಾ-11 ರಿಂದ 20 ರವರು ಹಾಗೂ ಇನ್ನಿತರರು ಬಂದು ನಮ್ಮನ್ನು ಸಂತೈಸಿ ಗಾಯಗೊಂಡ ನನ್ನನ್ನು , ಚಾಸಾ-6 ಮತ್ತು 8 ರವರನ್ನು ಖಾಸಗಿ ವಾಹನದಲ್ಲಿ ಹಾನಗಲ್ಲ ಸರ್ಕಾರಿ ಆಸ್ಪತ್ರೆಗೆ ಉಪಚಾರಕ್ಕಾಗಿ ಕಳುಹಿಸಿಕೊಟ್ಟರು. ನನ್ನನ್ನು ಮತ್ತು ಚಾಸಾ-6, ಚಾಸಾ-8 ರವರನ್ನು ಹೆಚ್ಚಿನ

ಉಪಚಾರಕ್ಕಾಗಿ ಹಾನಗಲ್ಲ ಸರ್ಕಾರಿ ಆಸ್ಪತ್ರೆಯಿಂದ ಹಾವೇರಿ ಜಿಲ್ಲಾಸ್ಪತ್ರೆಗೆ ಅಲ್ಲಿಂದ ಬೇರೆ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ಒಂದು ವಾರಗಳ ಕಾಲ ಚಿಕಿತ್ಸೆ ಪಡೆದಿರುತ್ತೇವೆ. ನಂತರ ನನ್ನನ್ನು ಮತ್ತು ಚಾಸಾ-8 ರವರನ್ನು ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ಅಲ್ಲಿ ನಾವು 4 – 5 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇವೆ. ಸದರಿ ಘಟನೆಯ ರಾತ್ರಿ 10.00 ಸುಮಾರಿಗೆ ನಡೆದಿರುತ್ತದೆ. ಅಲ್ಲಿ ಮೊಬೈಲ್ ಮತ್ತು ವಿದ್ಯುತ್ ದೀಪದ ಬೆಳಕು ಇತ್ತು. ಆರೋಪಿತರು ನೀರು ಬಿಡದ ಹಿನ್ನೆಲೆಯಿಂದ ಚಾಕು ಹಿಡಿದುಕೊಂಡು ಹಲ್ಲೆ ಮಾಡಿದರು. ಈ ಬಗ್ಗೆ ಊರಹಿರಿಯರು ಮತ್ತು ವೈದ್ಯರು ವಿಚಾರಿಸಿರುತ್ತಾರೆ. ಸದರಿ ಪ್ರಕರಣದ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಆರೋಪಿತರು ನ್ಯಾಯಾಲಯದ ಮುಂದೆ ಇರುತ್ತಾರೆ. 1 ನೇ ಆರೋಪಿಯು ನನ್ನನ್ನು ಚುಚ್ಚಿ ಗಾಯ ಪಡಿಸಲು ಬಳಸಿದ ಚಾಕುವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೆ ಮುಮಾ-1 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಜಗಳನ್ನು ಬಿಡಿಸಿಕೊಳ್ಳಲು ಹೋದ ಚಾಸಾ-1 ರವರ ಅಣ್ಣನ ಮಗಳು ಮತ್ತು ಚಾಸಾ-1 ರವರ ಹೆಂಡತಿ ಮನೆಯಿಂದ ಹೊರಗೆ ಅವರನ್ನು ಬಿಡಿಸಿಕೊಳ್ಳಲು ಬಂದ ಚಾಸಾ-9 , 10 ರವರಿಗೆ ಆರೋಪಿತರು ಅವರನ್ನು ಎಳೆದಾಡಿ , ಜಗ್ಗಿ ದೂಡಿ ಅವರ ಹೆಣ್ಣು ತನದ ಮಾನಭಂಗ ಮಾಡಿದರು ಎಂದರೆ ಸರಿ. 3 ಜನ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಹೊಡಿ ಬಡಿ ಮಾಡಿ ಗಾಯಪಡಿಸಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯು ಚಾಸಾ-6 ರವರ ಬಲಗೈ ಅಂಗೈಗೆ ಚಾಕು ಹಾಕಿ ಗಾಯ ಪಡಿಸಿದನು ಎಂದರೆ ಸರಿ. 1 ನೇ ಆರೋಪಿಯು ಚಾಸಾ-1 ರವರನ್ನು ಕುರಿತು ಯಾಕೆ ಮೆಂಬರ್ ಆಗಿದಿಯಲೇ ಸೂಳೇ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಅವನನ್ನು ಕೊಲ್ಲುವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ಮಾರನೇ ದಿನ ಬೆಳಿಗ್ಗೆ ಹಾನಗಲ್ಲ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ತನಿಖೆ ಕಾಲಕ್ಕೆ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಾನು ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ 3 – 4 ದಿನಗಳ ಕಾಲ ಮಾತ್ರ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ. ಆರೋಪಿತರು ಬಳಸಿದ ವಾಹನದ ನಂಬರ KA-27/EJ-8339 ಕೆಂಪು ಬಣ್ಣದ ಬಜಾಜ್ ಕಂಪನಿಯದ್ದಾಗಿತ್ತು ಎಂದರೆ ಸರಿ. ನನ್ನ ನೆನಪಿನ ಕೊರತೆಯ ಕಾರಣ ನನ್ನ ಮುಖ್ಯ ವಿಚಾರಣೆಗಳನ್ನು ಸದರಿ ವಿಷಯಗಳನ್ನು ಹೇಳಲಾಗಲಿಲ್ಲ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.